ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ವಿದ್ಯುಚ್ಛಕ್ತಿ ಲೈನನ್ನು ಬೇಗ ಮುಗಿಸಿದರೆ ಇದರಿಂದ ತುಂಬ ಜನರಿಗೆ ಉಪಕಾರ ವಾಗುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ತಮ್ಮ ಸಲಹೆಯೇನೋ ಒಳ್ಳೆಯದೆ. ಆಲೋಚನೆ ಮಾಡಿ ಎಸ್ಟಿಮೇಟನ್ನು ಕೊಡಲಾಗುತ್ತದೆ.

Measures taken to introduce the Uniform Weight System.

Q.—274. Sri K. V. BYRE GOWDA (Bangalore North).—

Will the Government be pleased to state :—

The measures taken by them after the last Session of the Assembly to introduce uniform weight system (particularly in Bangalore Mandypet regarding commission agents) ?

A.—Sri T. SIDDALINGAIYA (Minister for Industries).—Proposals for necessary legislative measures in this connection are under consideration of Government.

ಶ್ರೀ ಕೆ. ವಿ. ಬೈರೇಗೌಡ.—ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಲಾಗುತ್ತಿರುವ ತೂಕದಸಾಧನಗಳಿಗೆ 42ಸೇರಿನಿಂದ 62ಸೇರಿನ ವರೆಗೂ ವ್ಯತ್ಯಾಸವಾಗುತ್ತಿರುವಂಥ ಬಟ್ಟು ಗಳನ್ನು ಉಪಯೋಗಿಸುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

*ಶ್ರೀ ಟಿ. ಸಿದ್ದಲಿಂಗಯ್ಯ.—ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಮೈಸೂರು ಸಂಸ್ಥಾನವಲ್ಲದೆ ಇಂಡಿಯಾ ದೇಶದಲ್ಲಿ ಮತ್ತೆ ಎಲ್ಲಿಯಾದರೂ ಹೀಗೆ ಆಗತಕ್ಕ ತೂಕದಸಾಧನ ಗಳನ್ನು ಪಯೋಗಿಸುತ್ತಿರುವ ಸಂದರ್ಭ ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅನೇಕ ಪ್ರಾಂತ ಗಳಲ್ಲಿ ಅನೇಕ ತರಹವಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ಇದರಿಂದ ಜನರಿಗೆ ನಿಜವಾಗಿಯೂ ತೊಂದರೆಯಾಗುತ್ತಿದೆ ಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

Sri T. SIDDALINGAIYA.—I submit that the Bill is drafted on the lines of the Bombay Bill and it is under the consideration of the Government.

'Akashavani' Broadcasting Station

Q.—356. Sri S. GOPALA GOWDA (Sagar-Hosanagar).—

Will the Government be pleased to state.—

(*a*) the date on which the "Akashavani" broadcasting station was taken over by the Government of India ;

(*b*) the number of persons absorbed in the Government of India Service and the number and names of persons whose services were terminated ;

(*c*) whether any notice of termination was given to the persons whose services were terminated ; if so, how many days prior to the termination ;

(*d*) whether any compensation was paid to the retrenched personnel ; if so, the amount paid to each incumbent ;

(*e*) the terms of agreement with the Government of India in the matter of compensation, retrenchment, employment, etc. ?

A.—Sri T. SIDDALINGAIYA (Minister for Industries).—

(*a*) 1st April 1950.

(*b*) (i) 1. Gazetted Officers ... 2
2. Non-gazetted ... 26
3. Contract Staff ... 38
4. Menials ... 26

(ii) The following persons who were on contract basis were terminated from 1st April 1950 .—

Sriyuths.—
1. Mir Noor Hussain.
2. Mir Mohamed Hussain.
3. Mohamed Yacoob.
4. M. N. Sastry.
5. H. S. Narayana Rao.

(*c*) Yes. The question of allowing time did not arise as they were on contract basis and their services were terminated according to the terms of the contract.

(*d*) Does not arise in view of reply to (*c*).

(SRI T. SIDDALINGAIYA)

(e) *Vide* O.M. No. 12698-797—C.B. 148-49-2, dated the 29th March 1950, relating to the Federal Financial Integration placed on the Table. Copy placed in the Library *Vide* No. 12/L.A. of 1952.

ಶ್ರೀ ಎಸ್. ಗೋಪಾಲಗೌಡ.—ಕಾಂಟ್ರಾಕ್ಟ್ ಆಧಾರದ ಮೇಲೆ ತೆಗೆದು ಕೊಂಡಿದ್ದಂಥ 38 ಜನರ ಹೆಸರುಗಳನ್ನು ತಿಳಿಸಲಾಗುತ್ತದೆಯೇ?

Sri T. SIDDALINGAIYA—I want notice.

ಶ್ರೀ ಎಸ್. ಗೋಪಾಲಗೌಡ.—ಕಾಂಟ್ರಾಕ್ಟ್ ಆಧಾರದ ಮೇಲೆ ತೆಗೆದು ಕೊಂಡಿದ್ದವರೆಲ್ಲರನ್ನೂ ಆ ಅವಧಿ ಮುಗಿದು ಹೋದದ್ದರಿಂದ ಎಲ್ಲರನ್ನೂ ತೆಗೆದು ಹಾಕಲಾಯಿತೋ ಅಥವಾ ಕೆಲವರನ್ನು ಮಾತ್ರ ತೆಗೆದುಹಾಕಲಾಯಿತೋ?

ಶ್ರೀ ಟಿ. ಸಿದ್ದಲಿಂಗಯ್ಯ.—ಉತ್ತರದಲ್ಲೇ ಕ್ಲೀನಾಗಿ ಹೆಸರುಗಳ ಸಮೇತವಾಗಿ ತಿಳಿಸಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಸೀನಿಯಾರಿಟಿಯನ್ನೇನಾದರೂ ಗಮನಕ್ಕೆ ತೆಗೆದು ಕೊಂಡು ಕೆಲವರನ್ನು ಉಳಿಸಿಕೊಂಡಿರುತ್ತಾರೋ ಅಥವಾ ಅವರು ಬರೆದುಕೊಟ್ಟದ್ದ ಕಾಂಟ್ರಾಕ್ಟ್ ಒಪ್ಪಂದದ ಮೇರೆಗೆ ಇನ್ನು ಕೆಲವರನ್ನು ಅವರು ಉಳಿಸಿಕೊಂಡರೋ?

ಶ್ರೀ ಟಿ. ಸಿದ್ದಲಿಂಗಯ್ಯ.—ಅವರು ಯಾರು ಯಾರನ್ನು ಉಳಿಸಿಕೊಳ್ಳಬೇಕೆಂದು ಮನಸ್ಸು ಮಾಡಿದ್ದರೋ ಅವರೆಲ್ಲರನ್ನೂ ಉಳಿಸಿಕೊಂಡಿದ್ದಾರೆ.

Sri M. V. RAMA RAO (Tumkur).—May I ask whether contracts in respect of these 5 persons whose names have been mentioned were terminable as on 1st April 1950?

Sri T. SIDDALINGAIYA.—According to the date of the expiration of the contract, they were terminated.

Sri M. V. RAMA RAO.—What I am asking is this: I wanted to know whether the services of the persons who were detained were terminable on the date on which the services of the other persons were terminated.

Sri T. SIDDALINGAIYA.—I think it is quite clear. Their services have been terminated on the 1st of April 1950. Therefore the date on which their term has finished is also 1st of April 1950.

ಶ್ರೀ ವಿ. ಆರ್ ನಾಯ್ಡು (ಮಲ್ಲೇಶ್ವರಂ).—ಮೈಸೂರು ಪತ್ರಿಕೋದ್ಯೋಗಿಗಳಿಗೆ ಈ ಬ್ರಾಡ್ ಕ್ಯಾಸ್ಟಿಂಗ್‌ಸ್ಟೇಷನ್ನಿನಲ್ಲಿ ಹೆಚ್ಚಿಗೆ ಅವಕಾಶ ಸಿಕ್ಕುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಈ ವಿಚಾರದಲ್ಲಿ ತಾವು ಕೇಂದ್ರ ಸರ್ಕಾರಕ್ಕೇನಾದರೂ ಸಲಹೆ ಮಾಡುತ್ತಿರಾ?

ಶ್ರೀ ಟಿ. ಸಿದ್ದಲಿಂಗಯ್ಯ.—ಆ ವಿಚಾರ ನಮ್ಮ ಕೈಯಲ್ಲಿಲ್ಲಾ. ನೀವು ಅವರನ್ನೇ ಕೇಳಿಕೊಂಡು ನಿಮ್ಮ ಅನುಕೂಲಮಾಡಿಕೊಳ್ಳಬೇಕು.

ಶ್ರೀ ಯು. ಎಂ ಮಾದಪ್ಪ (ಚಾಮರಾಜನಗರ).—ನಮ್ಮ ಮೈಸೂರು ಸಂಸ್ಥಾನ ಇಂಡಿಯಾ ಸರ್ಕಾರದೊಡನೆ ವಿಲೀನೀಕರಣ ಮಾಡಿಕೊಂಡನಂತರ ಅವರು ನಮ್ಮಲ್ಲಿದ್ದ ಕೆಲವು ಅಧಿಕಾರಿಗಳನ್ನು ಅವರ ಅಡಳಿತಕ್ಕೆ ಸೇರಿಸಿಕೊಂಡನಂತರ ಅವರು ಆ ಪೈಕಿ ಕೆಲವರಿಗೆ ಹೆಚ್ಚಿನ ಸಂಬಳಕೊಟ್ಟು ಉಳಿದವರಿಗೆ ಆ ಹೆಚ್ಚಿನ ಸಂಬಳದ ಗ್ರೇಡನ್ನು ಕೊಡದಿರಲು ಕಾರಣವೇನು?

ಶ್ರೀ ಟಿ. ಸಿದ್ದಲಿಂಗಯ್ಯ.—ಅವರ ಕಂಡೀಷ್ ಪ್ರಕಾರ ಅವರು ಯಾರುಯಾರಿಗೆ ಕೊಡಬೇಕಾಗಿತ್ತೋ ಅವರುಗಳಿಗೆಲ್ಲಾ ಆ ಹೈಯರ್ ಗ್ರೇಡುಗಳನ್ನು ಕೊಟ್ಟಿದ್ದಾರೆ.

ಶ್ರೀ ಯು. ಎಂ. ಮಾದಪ್ಪ—ಕೇಂದ್ರಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಸಂಬಳ ಸಂಸ್ಥಾನದ ಅಧಿಕಾರಿಗಳಿಗೆ ಒಂದು ಸಂಬಳ ಸಾರಿಗೆ ಕೊಡುತ್ತಿರುವುದು ಯಾವನ್ಯಾಯ?

ಶ್ರೀ ಟಿ. ಸಿದ್ದಲಿಂಗಯ್ಯ.—ಆ ಬಗ್ಗೆ ನಾವು ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡಿದ್ದಾಯಿತು. ಆದರೆ ಅದು ಇನ್ನೂ ಸಾಧ್ಯವಾಗಿಲ್ಲ.

ಶ್ರೀ ಪಿ. ಆರ್ ರಾಮಯ್ಯ (ಬಸವನಗುಡಿ).—(ಈ) ಭಾಗಕ್ಕೆ ಒದಗಿಸಲಾಗಿರುವ ಉತ್ತರ

ನೋಡಿದರೆ ಮೈಸೂರಿನವರಿಗೆ ಇದರಲ್ಲಿ ಶಿಕ್ಷಣ ಪಡೆಯಲು ಅವಕಾಶಕೊಡಬೇಕೆಂದು ಅಗ್ರೀಮೆಂಟಿನಲ್ಲಿ ನಮೂದಿಸಲಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅಗ್ರಿಮೆಂಟಿನಲ್ಲಿ ಅದನ್ನೇ ಒಂದು ಪ್ರತ್ಯೇಕವಾಗಿ ಮಾಡಿಲ್ಲ. ಆದರೆ ಮೈಸೂರಿನವರಿಗೆ ವಿಶೇಷ ರೀತಿಯಲ್ಲಿ ತರಬೇತಾಗಲು ಅವಕಾಶ ಕೊಡಬೇಕೆಂದು ಒಂದು ಏರ್ಪಾಡನ್ನು ಮಾಡಲಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಕೊಡಲೇ ಬೇಕೆಂಬ ಒತ್ತಾಯವನ್ನು ಮೈಸೂರಿನವರು ಹಾಕಲು ಅಗ್ರೀಮೆಂಟಿನಲ್ಲಿ ಆ ಬಗ್ಗೆ ಏನನ್ನಾದರೂ ನಮೂದಿಸಲಾಗಿರುತ್ತದೆಯೇ?

Sri T. SIDDALINGAIYA.—After integration of services, certain rules have been framed. According to our rules, Mysoreans will also get their best chance.

Supply of Electricity to Sadalu from Chintamani.

Q.—503. **Sri G. PAPANNA** (Sidlaghatta-Chickballapur).—

Will the Gevernment be pleased to state.—

(*a*) whether the estimate for supplying electricity to Sadalu from Chintamani has been sanctioned ;

(*b*) if so, the reason for not commencing the work ?

A.— **Sri T. SIDDALINGAIYA** (Minister for Industries).—

(*a*) Yes.

(*b*) Due to the necessity of revising the sanctioned estimate and the low return not yielding even the interest charges on the capital outlay.

*ಶ್ರೀ ಜಿ. ಪಾಪಣ್ಣ.—ಚಿಂತಾಮಣಿಯಿಂದ ಸಾದಲಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸಲು ಜನರು ಅನೇಕ ಅರ್ಜಿಗಳನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಟಿ. ಸಿದ್ದಲಿಂಗಯ್ಯ.—ಕೊಟ್ಟಿರಬಹುದು.

ಶ್ರೀ ಜಿ. ಪಾಪಣ್ಣ.—ತಾವು (ಎ) ಪ್ರಶ್ನೆಗೆ ಒದಗಿಸಿರುವ ಉತ್ತರಕ್ಕೂ ಮತ್ತು (ಬಿ) ಪ್ರಶ್ನೆಯ ಉತ್ತರಕ್ಕೂ ಸರಿಹೊಂದುವುದಿಲ್ಲವಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅಲ್ಲಿ ಈಗ ಕೆಲಸ ಪ್ರಾರಂಭವಾಗಿದೆ. ಹಿಂದೆ ಇದ್ದ ಕೆಲಸದ ಸ್ಟೇಜ್ ಏನಿತ್ತೋ ಅದನ್ನು ಉತ್ತರದಲ್ಲಿ ಕೊಡಲಾಗಿದೆ. ಆದರೆ ಈಗ ನಾನು ಮಾನ್ಯ ಸದಸ್ಯರ ಅವಗಾಹನೆಗೆ ಇತ್ತೀಚೆಗೆ ಆಗಿರತಕ್ಕ ಕೆಲಸದ ಸ್ಟೇಜನ್ನು ತಂದಿದ್ದೇನೆ.

Electric pumps to wells in Sivagange, Dobbspet, etc.

Q.—529. **Sri D. M. GOVINDA RAJU** (Nelamangala).—

Will the Government be pleased to state.—

(*a*) whether any applications have been received from the people of the surrounding villages of Sivagange, Dobbspet and Thyamagondlu in Nelamangala Taluk, Bangalore District, to provide electric pumps to wells for irrigation purposes ;

(*b*) the number of applications received and from whom ;

(*c*) whether any endorsements have been issued to the petitioners ;

(*d*) whether steps would be taken to provide the irrigation pumps early ?

A.—**Sri T. SIDDALINGAIYA** (Minister for Industries).—

(*a*) Yes.

(*b*) Only one from Sri D. M. Govinda Raju.

(*c*) Yes.

(*d*) Yes.

ಶ್ರೀ ಡಿ. ಎಂ. ಗೋವಿಂದರಾಜು.—ಈ ಸಂಬಂಧವಾಗಿ ಎಸ್ಟಿಮೇಟುಗಳೇನಾದರೂ ತಯಾರಾಗಿರುತ್ತವೆಯೇ ? ಕೆಲಸವನ್ನು ಪ್ರಾರಂಭಿಸಲು ಯಾವಾಗ ಸಾಧ್ಯವಾಗುತ್ತದೆ ?

*ಶ್ರೀ ಟಿ. ಸಿದ್ದಲಿಂಗಯ್ಯ.—ಈಗ ಉತ್ತರದಲ್ಲಿ ತಿಳಿಸಿರುವ ಪ್ರಕಾರ ಮೊದಲು ಯಾವ ಸ್ಥಳಗಳಿಗೆ ಕೊಡಬೇಕೆಂದು ನಿರ್ಧಾರಮಾಡಲಾಗಿದೆಯೋ ಆ ಸ್ಥಳಗಳಿಗೆಲ್ಲ ಒದಗಿಸಿದ ಮೇಲೆ ಬಾಕಿ ಹಳ್ಳಿಗಳಿಗೆ ಒದಗಿಸಲಾಗುತ್ತದೆ.